ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2014-15 ಸಾಲಿನ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸಹಾಯಧನದ ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ : 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : No.5-40/2014-BE dated 12.09.2014
2) ಹಣಕಾಸು ಇಲಾಖೆಯ ಸಿ.ಸಿ.ಎಸ್. ಪತ್ರ ಸಂಖ್ಯೆ : ಎಫ್.ಡಿ./25/ಬಿ.ಜಿ.ಎಲ್./2014 ದಿನಾಂಕ 19.09.2014

ಪ್ರಸ್ತಾವನೆ :

2014-15ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯವು ಉಲ್ಲೇಖ (1)ರ ಪತ್ರದಲ್ಲಿ ಕೇಂದ್ರ ಸಹಾಯಧನ ರೂ.550.00 ಲಕ್ಷಗಳನ್ನು ಮೊದಲನೇ ಕಂತನ್ನಾಗಿ ಬಿಡುಗಡೆ ಮಾಡಲಾಗಿದೆ.

2014-15ನೇ ಸಾಲಿನ ರಾಜ್ಯ ಆಯವ್ಯಯದಡಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಲೆಕ್ಕ ಶೀರ್ಷಿಕೆ 2810-60-196-6-01 (2810-00-101-0-01)ರಡಿ ಕೇಂದ್ರ ಪಾಲಿನದಾಗಿ ರೂ.854.43 ಲಕ್ಷಗಳನ್ನು ನಿಗದಿಪಡಿಸಲಾಗಿದೆ ಮತ್ತು ರಾಜ್ಯ ಪಾಲಿನ ಸಹಾಯಧನ ರೂ.284.81 ಲಕ್ಷಗಳನ್ನು ಒಟ್ಟು ರೂ.1139.24 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದ್ದು, ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸದರಿ ಅನುದಾನವನ್ನು ಜಿಲ್ಲೆಗಳಿಗೆ ನಿಗದಿಪಡಿಸಿದ ಗುರಿ ಆಯವ್ಯಯದಡಿ ಹಂಚಿಕೆ ಮಾಡಲಾದ ಅನುದಾನ ಹಾಗೂ ಅನುದಾನದ ಮಿತಿಗೊಳಪಟ್ಟು, ಜಿಲ್ಲಾ ಪಂಚಾಯತಿಗಳಿಗೆ ಕೇಂದ್ರ ಮತ್ತು ರಾಜ್ಯ ಸಹಾಯಧನವನ್ನು ಬಿಡುಗಡೆ ಮಾಡಲು ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/41/ಜೈಅಯೋ/2014, ಬೆಂಗಳೂರು, ದಿನಾಂಕ 14.11.2014**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2014-15ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಪಾಲಿನ ಸಹಾಯಧನ ರೂ.302.898 ಲಕ್ಷಗಳನ್ನು (ರೂ. ಮುನ್ನೂರ ಎರಡು ಲಕ್ಷದ ಎಂಬತ್ತೊಂಬತ್ತು ಸಾವಿರದ ಎಂಟು ನೂರು ಮಾತ್ರ) ಮತ್ತು ರಾಜ್ಯ ಪಾಲಿನ ಸಹಾಯಧನ ರೂ.116.115 ಲಕ್ಷ (ರೂ. ಒಂದುನೂರ ಹದಿನಾರು ಲಕ್ಷದ ಹನ್ನೊಂದು ಸಾವಿರದ ಐದು ನೂರು ಮಾತ್ರ) **ಒಟ್ಟು ರೂ.419.013 ಲಕ್ಷ (ರೂ. ನಾಲ್ಕುನೂರು ಹತ್ತೊಂಬತ್ತು ಲಕ್ಷದ ಒಂದು ಸಾವಿರದ ಮೂರು ನೂರು ಮಾತ್ರ)** ಇದರೊಂದಿಗೆ ಲಗತ್ತಿಸಲಾದ ಅನುಬಂಧದಲ್ಲಿ ನಮೂದಿಸಲಾದಂತೆ ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಹಾಲಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ವಿನಿಯೋಗಿಸಿ, ನಿಗದಿಪಡಿಸಲಾದ ಗುರಿಯನ್ವಯ ಶೇ.100 ರಷ್ಟು ಪ್ರಗತಿಯನ್ನು ಫೆಬ್ರವರಿ 2014 ರೊಳಗೆ ಕಡ್ಡಾಯವಾಗಿ ಸಾಧಿಸುವುದು ಹಾಗೂ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾದ ಕೇಂದ್ರ ಹಾಗೂ ರಾಜ್ಯ ಸಹಾಯಧನಕ್ಕೆ ಸಿ.ಎ.ರವರಿಂದ ಆಡಿಟ್ ಮಾಡಿಸಿ, ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಬಿಡುಗಡೆ ಮಾಡಿದ ಅನುದಾನವನ್ನು ಲೆಕ್ಕ ಶೀರ್ಷಿಕೆ 2810-60-196-6-01 (2810-00-101-0-01)ರಡಿ ವೆಚ್ಚ ಭರಿಸತಕ್ಕದ್ದು. ಸದರಿ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಗ್ರಾಅಪ 608 ಪಿಬಿಎಸ್ 2014 ದಿನಾಂಕ 14.10.2014 ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

**ಪ್ರತಿ ಜೈವಾನಿಲ ಘಟಕ ನಿರ್ಮಾಣದಲ್ಲಿಯೂ ಮೂರು ಹಂತದಲ್ಲಿ (ತಳಪಾಯ ಅಗೆದ ಮೇಲೆ ಡ್ರಮ್ ಕೂರಿಸುವ ಮೊದಲು, ಡ್ರಮ್ ಕೂರಿಸಿದ ನಂತರ) ಫಲಾನುಭವಿಯೊಂದಿಗೆ ಜಿ.ಪಿ.ಎಸ್. ಆಧಾರಿತ ಫೋಟೋ ತೆಗೆದು ಅಪ್‌ಲೋಡ್ ಮಾಡಬೇಕು ಹಾಗೂ "ಗಾಂಧಿ ಸಾಕ್ಷಿ ಕಾಯಕ" ತತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಬೇಕು ಎಂಬ ಷರತ್ತಿಗೊಳಪಟ್ಟು ಈ ಅನುದಾನ ಬಿಡುಗಡೆ ಮಾಡಲಾಗಿದೆ.**

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ವೆಚ್ಚ ಭರಿಸಿ, ಈ ಅನುದಾನ ಬಳಕೆ ಮಾಡಿಕೊಂಡಿರುವ ಫಲಾನುಭವಿಗಳ ವಿವರಗಳನ್ನು ಒದಗಿಸಿದ್ದಲ್ಲಿ ಮಾತ್ರ ಎರಡನೇ ಕಂತು ಬಿಡುಗಡೆ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿ (ಅಭಿವೃದ್ಧಿ) / ಮುಖ್ಯ ಲೆಕ್ಕಾಧಿಕಾರಿಗಳು.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಖಜಾನಾಧಿಕಾರಿಗಳು.
6. ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
7. ಖಜಾನೆಗಳ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
8. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
10. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

# ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 41 ಜೈಅಯೋ 2014 ದಿನಾಂಕ 14.11.2014

**2014-15ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ (ಮೊದಲನೇ ಕಂತಿನ) ಸಹಾಯಧನ ಬಿಡುಗಡೆಯ ವಿವರ :**

| ಕ್ರ ಸಂ | ಜಿಲ್ಲೆ | 2014-15ನೇ ಸಾಲಿಗೆ ಬಿಡುಗಡೆ ಪ್ರಸ್ತಾಪಿತ ಅನುದಾನ | | |
|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು |
| 1 | ಬಾಗಲಕೋಟೆ | 15.763 | 8.531 | 24.294 |
| 2 | ಬೆಂಗಳೂರು (ಗ್ರಾ) | 4.850 | 0.295 | 5.145 |
| 3 | ಬೆಂಗಳೂರು (ನ) | 14.550 | 5.250 | 19.800 |
| 4 | ಬಳ್ಳಾರಿ | 4.850 | 1.750 | 6.600 |
| 5 | ಬೀದರ್ | 9.700 | 3.500 | 13.200 |
| 6 | ಬಿಜಾಪುರ | 12.250 | 8.750 | 21.000 |
| 7 | ಚಾಮರಾಜನಗರ | 4.850 | 1.750 | 6.600 |
| 8 | ಚಿಕ್ಕಮಗಳೂರು | 12.125 | 4.375 | 16.500 |
| 9 | ಚಿಕ್ಕಬಳ್ಳಾಪುರ | 6.305 | 2.241 | 8.546 |
| 10 | ಚಿತ್ರದುರ್ಗ | 7.275 | 2.625 | 9.900 |
| 11 | ದಕ್ಷಿಣ ಕನ್ನಡ | 20.000 | 1.580 | 21.580 |
| 12 | ಧಾರವಾಡ | 4.850 | 1.750 | 6.600 |
| 13 | ಗದಗ | 4.850 | 1.750 | 6.600 |
| 14 | ಗುಲ್ಬರ್ಗಾ | 10.670 | 3.850 | 14.520 |
| 15 | ಹಾಸನ | 31.525 | 22.750 | 54.275 |
| 16 | ಹಾವೇರಿ | 8.000 | 1.480 | 9.480 |
| 17 | ಕೊಡಗು | 7.760 | 2.800 | 10.560 |
| 18 | ಕೊಪ್ಪಳ | 7.275 | 2.625 | 9.900 |
| 19 | ಮಂಡ್ಯ | 16.975 | 6.125 | 23.100 |
| 20 | ಮೈಸೂರು | 19.400 | 7.000 | 26.400 |
| 21 | ರಾಮನಗರ | 3.000 | 0.166 | 3.166 |
| 22 | ರಾಯಚೂರು | 12.125 | 4.375 | 16.500 |
| 23 | ಶಿವಮೊಗ್ಗ | 30.000 | 9.934 | 39.934 |
| 24 | ತುಮಕೂರು | 14.550 | 5.250 | 19.800 |
| 25 | ಉಡುಪಿ | 2.425 | 0.253 | 2.678 |
| 26 | ಉತ್ತರ ಕನ್ನಡ | 9.700 | 2.735 | 12.435 |
| 27 | ಯಾದಗಿರಿ | 7.275 | 2.625 | 9.900 |
| | ಒಟ್ಟು | **302.898** | **116.115** | **419.013** |

ನಿರ್ದೇಶಕರು (ಗ್ರಾಮೂಸೌ -2) ಮತ್ತು
ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು